GULBARGA UNIVERSITY
"Jnana Ganga", GULBARGA - 585 106, Karnataka, India.
☎ 08472-263202
Fax 08472-263206
E-Mail: registrar@gug.ac.in
Website: www.gug.ac.in

ಕ್ರ.ಸಂ.ಗುವಿಕ/ವಿಮವಿ/ಬಿ.ಸಿ.ಎಸ್/2018-19/359 ದಿನಾಂಕ: 28.05.2018.

ಸುತ್ತೋಲೆ

ವಿಷಯ:- 2018-19ನೇ ಸಾಲಿನಿಂದ ಪದವಿ ಹಂತದ ಪಠ್ಯಕ್ರಮದಲ್ಲಿ "ಸಿಬಿಸಿಎಸ್" ಮಾದರಿಯನ್ನು ಅಳವಡಿಸಿ ಜಾರಿಗೊಳಿಸುವ ಕುರಿತು.

ಉಲ್ಲೇಖ:- 1. ಎಲ್ಲಾ ನಿಕಾಯದ ಡೀನ್‌ರ ಸಭೆಯ ನಿರ್ಣಯ ದಿನಾಂಕ 23.05.2018
2. ನಿರ್ದೇಶಕರು ಪಿ.ಎಂ.ಇ.ಬಿ ರವರ ಪತ್ರ ದಿನಾಂಕ 24.05.2018.

ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ, ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ ನಿರ್ದೇಶನದಂತೆ, ಪ್ರಸಕ್ತ 2018-19 ನೇ ಶೈಕ್ಷಣಿಕ ಸಾಲಿನಿಂದ ಪದವಿ ಕೋರ್ಸುಗಳಲ್ಲಿ ಸಿಬಿಸಿಎಸ್ **(Choice Based Credit System)** ಮಾದರಿಯನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಕಡ್ಡಾಯವಾಗಿರುವುದರಿಂದ, ಇದೇ ಶೈಕ್ಷಣಿಕ ಸಾಲಿನಿಂದ ಪದವಿ ಹಂತದಲ್ಲಿ ಸಿಬಿಸಿಎಸ್ ಪಠ್ಯಕ್ರಮವನ್ನು ಅಳವಡಿಸಲು ವಿಶ್ವವಿದ್ಯಾಲಯವು ನಿರ್ಧರಿಸಿದೆ.

ಅದ್ದರಿಂದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಪ್ರಸಕ್ತ 2018-19 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಸೆಮಿಸ್ಟರ ಪದವಿ ಕೋರ್ಸಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ನೂತನ / ಪರಿಷ್ಕೃತ ಪಠ್ಯಕ್ರಮದ ಪ್ರಕಾರ ಬೋಧನೆ ಮಾಡಬೇಕಾಗುವುದು. ಪರಿಷ್ಕೃತ ಪಠ್ಯಕ್ರಮವನ್ನು ಶೀಘ್ರದಲ್ಲಿ ಎಲ್ಲಾ ಮಹಾವಿದ್ಯಾಲಯಗಳಿಗೆ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

(ಸಹಿ) 26/5/18
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,

ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ,

ಪ್ರತಿಗಳು:-

1. ಎಲ್ಲಾ ನಿಕಾಯದ ಡೀನರಿಗೆ, ಗು.ವಿ.ಕಲಬುರಗಿ ರವರ ಮಾಹಿತಿಗಾಗಿ.
2. ಕುಲಸಚಿವರು (ಮೌಲ್ಯಮಾಪನ), ಗು.ವಿ.ಕಲಬುರಗಿ ರವರ ಮಾಹಿತಿಗಾಗಿ.
3. ವಿತ್ತಾಧಿಕಾರಿಗಳು, ಗು.ವಿ.ಕಲಬುರಗಿ ರವರ ಮಾಹಿತಿಗಾಗಿ.
4. ನಿರ್ದೇಶಕರು, PMEB ಗು.ವಿ.ಕಲಬುರಗಿ ರವರ ಮಾಹಿತಿಗಾಗಿ.
5. ವಿಶೇಷಾಧಿಕಾರಿಗಳು, ವಿದ್ಯಾಮಂಡಲ ವಿಭಾಗ, ಗು.ವಿ.ಕಲಬುರಗಿ ರವರ ಮಾಹಿತಿಗಾಗಿ.
6. ಕುಲಪತಿಗಳ ಆಪ್ತ ಕಾರ್ಯದರ್ಶಿ/ ಕುಲಸಚಿವರ ಆಪ್ತ ಸಹಾಯಕ ಗು.ವಿ.ಕಲಬುರಗಿ ರವರ ಮಾಹಿತಿಗಾಗಿ.
7. ಮುಖ್ಯಸ್ಥರು, ಗಣಕ ಕೇಂದ್ರ, ಗು.ವಿ.ಕ ಇವರಿಗೆ ಸದರಿ ವಿಷಯವನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.